ಸ್ಥಾಪನೆ ಮಾಡಿದ್ದೇವೆ. ನಾನು ವಿಶ್ವವಿದ್ಯಾನಿಯದವರಿಗೆ ಹೇಳುತ್ತೇನೆ. ಬಾರ್ಡರ್ ಇದೆ ಅದಕ್ಕೋಸ್ಕರ ಬೇಕು ಎಂದು ಹೇಳುತ್ತಾರೆ. ವಿಶ್ವವಿದ್ಯಾನಿಲಯದವರಿಗೆ ತಿಳಿಸಿ ಅಲ್ಲಿ ಅವಶ್ಯಕತೆ ಇದ್ದರೆ ಅಲ್ಲಿ ಪಿ.ಜಿ.ಕೋರ್ಸ ಅನ್ನು ಪ್ರಾರಂಭ ಮಾಡುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರ್ : ಬೀದರ್ ಜಿಲ್ಲೆ ಗುಲ್ಬರ್ಗ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತದೆ. ಒಂದು ಕಡೆ ಮಹಾರಾಷ್ಟ್ರದ ಗಡಿ ಪ್ರದೇಶ ಮತ್ತೊಂದು ಕಡೆ ಆಂಧ್ರ ಪ್ರದೇಶದ ಗಡಿ ಪ್ರದೇಶ ಇದೆ. ಎರಡೂ ಕಡೆ ಯೂನಿವರ್ಸಿಟಿ ಕೊಟ್ಟಿದ್ದಾರೆ. ನಮ್ಮಲ್ಲಿ ಒಂದು ಪಿ ಜಿ ಕೋರ್ಸ ಪ್ರಾರಂಭ ಮಾಡುವುದರಿಂದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಕ್ಕೆ ಹೋಗುವ ಅವಶ್ಯಕತೆ ನಮ್ಮ ವಿದ್ಯಾರ್ಥಿಗಳಿದೆ ಬರುವುದಿಲ್ಲ. ಪಿ.ಜಿ.ಕೋರ್ಸ ಅವಶ್ಯಕತೆಯ ಬೇಡಿಕೆಯಾಗಿದೆ. ಸದರಿ ಸಂಬಂಧದಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯದವರು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದಾರೆ. ಸರ್ಕಾರಕ್ಕೆ ಇದು ಬಂದಿದ್ದೆಯೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಡಿ. ಮಂಜುನಾಥ : ನಾನು ಈಗಾಗಲೇ ಹೇಳಿದೆ. 3 ಕಡೆ ಪಿ.ಜಿ ಕೋರ್ಸಗಳು ಇವೆ. 4ನೇ ಕಡೆ ಕೊಡಿ ಎಂದು ಕೇಳುತ್ತಿದ್ದಾರೆ. ವಿಶ್ವವಿದ್ಯಾನಿಲಯದಿಂದ ಪ್ರಾರಂಭ ಮಾಡಬೇಕಾಗುತ್ತದೆ. ಪಿ.ಜಿ.ಸೆಂಟರ್ಸ ಅನ್ನು ಬೇರೆ ಕಡೆ ಮಾಡುವುದಕ್ಕಾಗುವುದಿಲ್ಲ. ಕಾಲೇಜನ್ನು ಮಾಡಬಹುದು ಅಷ್ಟೆ. ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ತಿಳಿಸುತ್ತೇನೆ. ವಿಶ್ವವಿದ್ಯಾನಿಲಯದವರಿಗೆ ಹೇಳಿ ಅಲ್ಲಿ ಅವಶ್ಯಕತೆ ಇದ್ದರೆ ಆದಷ್ಟು ಜಾಗ್ರತೆ ಪರಿಶೀಲನೆ ಮಾಡಿ. ಅವಶ್ಯಕತೆ ಇದ್ದರೆ ಮುಂದಿನ ವರ್ಷದಿಂದ ಪ್ರಾರಂಭ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ : ಅಲ್ಲಿ ಷುಗರ್ ಟೆಕ್ನಾಲಜಿ ಇನ್ನೂ ಪ್ರಾರಂಭವಾಗಿಲ್ಲ. ಅದಕ್ಕಿಂತ ಹೆಚ್ಚಿನ ಅವಶ್ಯಕತೆ ಇದಾಗಿದೆ. ಬಹಳ ದಿನಗಳಿಂದ ವಿದ್ಯಾರ್ಥಿಗಳು ಕೇಳುತ್ತಿದ್ದಾರೆ. ಯೂನಿವರ್ಸಿಟಿಯಿಂದ ರೆಕಮಂಡಾಗಿ ಬಂದಿದೆ. ನಮ್ಮದು ರಾಜಧಾನಿಗೆ ತುಂಬಾ ದೂರವಾಗಿ ಇದೆ. ಆದ್ದರಿಂದ ಪ್ರಸ್ತುತ ವರ್ಷದಲ್ಲಿ ಮಾಡಬೇಕು.

ಶ್ರೀ ಡಿ. ಮಂಜುನಾಥ : ಪ್ರಸ್ತುತ ವರ್ಷದಲ್ಲಿ ದೂರುವುದು ಒಳ್ಳೆಯದೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಲ್ಲಿ ಒಂದು ಸಂಸ್ಥೆ ಸ್ಥಾಪನೆಯಾಗಿದೆ. ಮಾನ್ಯ ಸದಸ್ಯರು ಈ ವರ್ಷವೇ ಪಿಜಿ ಕೋರ್ಸ ಸೆಂಟರ್ ಆಗಬೇಕೆಂದು ಕೇಳುತ್ತಿದ್ದಾರೆ. ಈಗಾಗಲೇ ಸಮಯ ಆಗಿದೆ. ಆದ್ದರಿಂದ ಮುಂದಿನ ವರ್ಷದಿಂದ ಪ್ರಾರಂಭ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ವಿಶ್ವವಿದ್ಯಾಲಯದವರಿಗೆ ತಿಳಿಸುತ್ತೇನೆ.

ಕೊಣನೂರಿನ ಪ್ರಥಮ ದರ್ಜೆಯ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ

100 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಕಲಗೂಡು ತಾಲ್ಲೂಕು ಕೊಣನೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು ?

ಅ) *ಈ ಕಾಲೇಜಿನಿಂದ 14 ಉಪನ್ಯಾಸಕರುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿರುವ ಈ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?*

ಶ್ರೀ ಡಿ. ಮಂಜುನಾಥ (ಉನ್ನತ ಸಚಿವರು) :

ಅ) 03

ಆ) ಈ ಕಾಲೇಜಿನ ಕೆಲವು ಉಪನ್ಯಾಸಕರನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಬೇರೆಡೆಗೆ ವರ್ಗಾಯಿಸಿದೆ.

ಇ) ವಿದ್ಯಾರ್ಥಿ ಸಮುದಾಯದ ಪಾಠಪ್ರವಚನದ ಹಿತದೃಷ್ಟಿಯಿಂದ ಆಗತ್ಯವಿದ್ದೆಡೆಯಲ್ಲಿ ಅರೆಕಾಲಿಕ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲು ಸರ್ಕಾರವು ಅನುಮತಿ ನೀಡಿದೆ.

ಶ್ರೀ ಎ.ಟಿ. ರಾಮಸ್ವಾಮಿ : ಅರಕಲಗೂಡು ತಾಲ್ಲೂಕಿನ ಕೋಣನೂರು ಅಥವಾ ಮಂಡಲ ಪಂಚಾಯತಿ ಕೇಂದ್ರ ಸುಮಾರು 45 ವರ್ಷಗಳ ಹಿಂದೆ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾಯಿತು. ಅಲ್ಲಿ ಒಂದು ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆ ಕಾಲೇಜಿನಿಂದ 14 ಜನ ಉಪನ್ಯಾಸಕರನ್ನು ಹೊರಗಡೆಗೆ ವರ್ಗ ಮಾಡಿದ್ದೀರಿ. ಸಾರ್ವಜನಿಕ ಹಿತಾಸಕ್ತಿ ಮೇಲೆ ಹೊರಗಡೆಗೆ ವರ್ಗ ಮಾಡಿದ್ದೇವೆಂದು ತಾವು ಉತ್ತರ ಕೊಟ್ಟಿದ್ದೀರಿ, ನಗರ ಪ್ರದೇಶದಿಂದ ಗ್ರಾಮಾಂತರ ಪ್ರದೇಶಕ್ಕೆ ವರ್ಗಾವಣೆ ಮಾಡಿದ್ದರೆ ಅದು ಸಾರ್ವಜನಿಕ ಹಿತಾಸಕ್ತಿಯಾಗುತ್ತಿತ್ತು. ಆದರೆ ನೀವು ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಪ್ರಥಮ ದರ್ಜೆ ಕಾಲೇಜಿನಿಂದ ನೀವು ನಗರಕ್ಕೆ ವರ್ಗಾವಣೆ ಮಾಡಿದ್ದೀರಿ. ಇದು ಸಾರ್ವಜನಿಕ ಹಿತಾಸಕ್ತಿಯೇ ಅಥವಾ ವ್ಯಕ್ತಿ ಹಿತಾಸಕ್ತಿಯೇ ಎಂಬುದನ್ನು ತಾವೇ ಹೇಳಬೇಕು. ಸ್ವಂತ ಹಿತಾಸಕ್ತಿಗೆ ಮಣೆದು ಸಾರ್ವಜನಿಕ ಹಿತಾಸಕ್ತಿಯನ್ನು ಸರಕಾರ ಕಡೆಗಣಿಸಿದೆ ಎಂದು ನನಗಂತೂ ವೈಯಕ್ತಿಕವಾಗಿ ಅನ್ನಿಸುತ್ತದೆ. ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಕೇವಲ 3 ಜನ ಶಿಕ್ಷಕರಿದ್ದಾರೆ. ಇದನ್ನು ಯಾವಾಗ ನೀವು ಸರಿಪಡಿಸುತ್ತೀರಿ? ಯಾವಾಗ ಉಪನ್ಯಾಸಕರನ್ನು ತುಂಬುತ್ತೀರಿ? ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತಿದ್ದೀರಿ, ಇದರಿಂದ ನೀವು ಪ್ರೋತ್ಸಾಹ ಕೊಟ್ಟ ಹಾಗೆ ಆಯಿತೇ? ತಮ್ಮಿಂದ ಉತ್ತರ ನಿರೀಕ್ಷಿಸುತ್ತೇನೆ.

ಶ್ರೀ ಡಿ. ಮಂಜುನಾಥ : ಅನೇಕ ಕಾಲೇಜುಗಳಲ್ಲಿ ಉಪಾಧ್ಯಾಯರ ಹುದ್ದೆಗಳು ಖಾಲಿ ಇವೆ. ಕೆಲವು ಕಡೆ 3-4 ವರ್ಷದಿಂದ ತುಂಬಿಲ್ಲ, ರೆಕ್ರೋಟ್ ಮೆಂಟ್ ಆಗಿಲ್ಲ. ಅದಕ್ಕೋಸ್ಕರ ನಾವು ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡುವುದಕ್ಕೆ ಅವಕಾಶ ಮಾಡಿದ್ದೇನೆ. ಅಲ್ಲಿ ಇದ್ದಾರೆ. ಹೆಚ್ಚಿಗೆ ಜನರನ್ನು ನಾನಾ ಕಾರಣದಿಂದ ನಾವು ವರ್ಗ ಮಾಡಿದ್ದೇವೆ. ಲೋಕಸೇವಾ ಆಯೋಗದಿಂದ ನಮಗೆ ಪಟ್ಟಿ ಈಗಾಗಲೇ ಸಿದ್ಧವಾಗಿದೆ. ಗ್ರಾಮಾಂತರ ಪ್ರದೇಶದಿಂದ ಬಂದವನು. ನಮ್ಮ ಕಾಲೇಜು ಶಿಕ್ಷಣ ನಿರ್ದೇಶಕರಿಗೆ ಹೇಳಿದ್ದೇನೆ. ತಕ್ಷಣವೇ ಬೇರೆ ಕಡೆಗೆ ಇದ್ದರೆ ಇವರನ್ನು ಅಲ್ಲಿಗೆ ಏನಾದರೂ ಮಾಡಿ ಸಂಯೋಜನೆ ಮಾಡಿ ಎಂದು.

ಶ್ರೀ ಎ.ಟಿ. ರಾಮಸ್ವಾಮಿ : ಅರೆಕಾಲಿಕ ಉಪನ್ಯಾಸಕರನ್ನು ನೇಮಕ ಮಾಡಲಿಕ್ಕೆ ಆದೇಶ ಕೊಟ್ಟಿದ್ದೇವೆ. ತಾತ್ಕಾಲಿಕವಾಗಿ ಎಂದು ಹೇಳಿದರು. ಅಲ್ಲಿ ಲೋಕಲ್ ಆಗಿ ಸಿಗತಕ್ಕಂತವರನ್ನು ವಾಣಿಜ್ಯ, ಸೈನ್ಸ್ ಟೀಚರ್ ಎಂದು ನೇಮಕ ಮಾಡಿಕೊಂಡರೆ ಅಲ್ಲಿನ ವಿದ್ಯಾರ್ಥಿಗಳಿಗೆ ಉತ್ತಮವಾದ ಬೋಧನೆ ದೊರೆಯುತ್ತದೆಯೇ ಹೇಳಿ. ನೀವು ಎಲ್ಲಿಂದಲಾದರೂ ಕೊಡಿ. ನಿಮಗೆ ಸಾರ್ವಜನಿಕ ಹಿತಾಸಕ್ತಿ ಇದ್ದರೆ ನಗರ ಪ್ರದೇಶದಲ್ಲಿರತಕ್ಕಂತಹ ಉಪನ್ಯಾಸಕರನ್ನು ಗ್ರಾಮಾಂತರ ಪ್ರದೇಶಕ್ಕೆ ತುಂಬಿ. ಅದು ಸಾರ್ವಜನಿಕ ಹಿತಾಸಕ್ತಿ. ವೈಯಕ್ತಿಕ ಹಿತಾಸಕ್ತಿಗೆ ಮಣೆದರೆ ನಿಮಗೆ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಉದ್ಧಾರ ಮಾಡುವುದಕ್ಕಾಗುವುದಿಲ್ಲ. ಲೋಕಸೇವಾ ಆಯೋಗದ್ದು ತಮಗೆ ಗೊತ್ತಿದೆ. ತಕ್ಷಣ ಕ್ಕೇನಾದರೂ ವ್ಯವಸ್ಥೆ ಮಾಡಿಕೊಡುತ್ತೀರೋ?

ಶ್ರೀ ಡಿ. ಮಂಜುನಾಥ : ರಾಮಸ್ವಾಮಿಯವರಿಗೇನು ಕಳಕಳಿ ಇದೆ ಅವರಿಗಿಂತ ಹೆಚ್ಚು ಕಳಕಳಿ ನನಗೆ ಇದೆ. ನಗರಗಳಲ್ಲಿ ಇರುವವರನ್ನು ಗ್ರಾಮಾಂತರ ಪ್ರದೇಶಕ್ಕೆ ವರ್ಗ ಮಾಡಿ ನಮಗೆ ಬಹಳ ತೊಂದರೆಯಾಗಿದೆ. ಅವರು ಅಲ್ಲಿಗೆ ಹೋಗುವುದಿಲ್ಲ. ಶಾಸಕರಿಂದ ಒತ್ತಡ ತರುತ್ತಾರೆ. ಆದರೂ ಸಹ ಅಲ್ಲಿನ ತೊಂದರೆಯನ್ನು ನಾನು ದೂರವಾಣಿ ಮಾಡಿ ತಿಳಿದುಕೊಂಡಿದ್ದೇನೆ. ಕೆ.ಪಿ.ಎಸ್.ಸಿ.ಯಲ್ಲಿ ಪಟ್ಟಿ ಈಗ ರೆಡಿ ಇದೆ. ಅದು ಬಂದರೆ ಜಾಗ್ರತೆ ತುಂಬುತ್ತೇವೆ. ಇಲ್ಲದಿದ್ದರೆ ನಗರಪ್ರದೇಶದಲ್ಲಿರುವ ಕೆಲವರನ್ನು ಅಲ್ಲಿಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವೈ. ರಾಮಕೃಷ್ಣ : ಒಂದು ಸಮಯ ನಿಗದಿ ಮಾಡಿ. ಎಷ್ಟು ದಿವಸದಲ್ಲಿ ಈ ಸ್ಟಾಫ್‌ನ್ನು ಕೊಡುತ್ತೇವೆಂದು ಹೇಳಿ. ಎಷ್ಟು ದಿವಸದಲ್ಲಿ ಈ ಉಪನ್ಯಾಸಕರನ್ನು ಹಾಕುತ್ತೀರಿ ಎಂಬ ಬಗ್ಗೆ ಸಮಯ ತಿಳಿಸಿ. ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರತಕ್ಕಂತಹ ಎಲ್ಲಾ ಕಾಲೇಜು ಗಳಲ್ಲಿ ಖಾಲಿ ಇರುವ ಹುದ್ದೆಗಳು ಬಹಳ ಇವೆ. ತಾವು ಸ್ಪೆಸ್ಪಿಫಿಕ್ ಆಗಿ ಎಷ್ಟು ದಿವಸಗಳಲ್ಲಿ ಉಪನ್ಯಾಸಕರನ್ನು ಕೊಡುತ್ತೀರಿ ಎಂಬ ಬಗ್ಗೆ ತಿಳಿಸಿ.

ಶ್ರೀ ಡಿ. ಮಂಜುನಾಥ್ : ಇಷ್ಟೇ ದಿವಸದಲ್ಲಿ ಕೊಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ನನಗೂ ಗೊತ್ತಿದೆ. ಎಲ್ಲೆಲ್ಲಿ ತೊಂದರೆ ಇದೆ ಎಂದು ಮಾಹಿತಿ ತರಿಸಿಕೊಂಡಿದ್ದೇನೆ. ಅದನ್ನು ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪಿ.ಎನ್.ಸಿ.ಯಲ್ಲಿ ಲಿಸ್ಟ್ ರೆಡಿ ಇದೆ. ವೆರಿಫಿಕೇಶನ್ ಕೆಲಸ ಮಾತ್ರ ಆಗಬೇಕಾಗಿದೆ. ಅದಾದ ತಕ್ಷಣ ಮೊದಲು ಗ್ರಾಮಾಂತರ ಪ್ರದೇಶಕ್ಕೆ ತುಂಬುವುದು. ಸಿಟಿಗಳಲ್ಲಿ ಹಾಕುವುದೇ ಇಲ್ಲ. ಆ ಎಲ್ಲಾ ಲಿಸ್ಟ್ ಬಂದ ಮೇಲೆ ಗ್ರಾಮಾಂತರ ಪ್ರದೇಶಕ್ಕೆ ಕಳುಹಿಸುವುದು.

ಭಟ್ಕಳ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆ

101 - ಡಾ. ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರಾಥಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ವಿಧಾನ ಸಭಾ ಕ್ಷೇತ್ರದ ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿವೆ. ಇವುಗಳಲ್ಲಿರುವ ಒಟ್ಟು ಸಂಖ್ಯೆ ಎಷ್ಟು?